ಮುಗಿದ ಮೇಲೆ ಚಾರುದತ್ತರು ಹಿಮದರ್ಶನದ ಒಂದು ಭಾಗವನ್ನು ಬಾರನ್ನಾಗಿ ಮಾಡಿದ್ದರು. ಇನ್ನೊಂದು ಭಾಗದಲ್ಲಿ ಸಸ್ಯಾಹಾರವೂ ಮುಂದುವರಿದಿತ್ತು.

'ಅಪ್ಪಯ್ಯನಿಗೆ ಸರಳ ಜ್ಞಾನ ಇಲ್ಲ. ಈ ಹಸಿರು ಬೆಟ್ಟ, ಈ ಚಳಿಯ ಗಾಳಿ, ಈ ಮಾಯದಂತಹ ಮಳೆ. ಈ ಮನೋಹರ ಮಂಜು. ಇಲ್ಲಿ ಯಾರಾದರೂ ದನಗಳ ಹಾಗೆ ಸಸ್ಯಾಹಾರ ತಿನ್ನುತ್ತಾರಾ? ಇಲ್ಲಿ ಬೇಕಾಗಿರುವುದು ಒಂದು ಬಾರು' ಎಂದು ಹಿಮದರ್ಶನವನ್ನು ಬಾರು ಮಾಡಿದ್ದರು. ಇಂಗ್ಲಿಷರ ಕಾಲದ ದಪ್ಪ ಇಟ್ಟಿಗೆಯ ಗೋಡೆ, ಮರದ ಹಾಸಿನ ನೆಲ, ದಪ್ಪ ಗಾಜಿನ ಕಿಟಕಿ ಬಾಗಿಲುಗಳು, ಮಾಡಿನಿಂದ ತೂಗುವ ಸಣ್ಣ ಸಣ್ಣ ಬೆಳಕಿನ ದೀಪಗಳು, ಅದರ ಕೆಳಗೆ ಬೀಟೆಮರದ ಕಗ್ಗ್ರಗೆ ಹೊಳೆಯುವ ಪೀಠೋಪಕರಣಗಳು. ಗೋಡೆಗೆ ಅಂಟಿಕೊಂಡ ಗಾಜಿನ ಕಪಾಟುಗಳಲ್ಲಿ ಜೋಡಣೆಗೊಂಡ ಮದ್ಯದ ಬಾಟಲುಗಳು ಮತ್ತು ಬೆಳ್ಳಗೆ ಹೊಳೆಯುವ ಲೋಟಗಳು. 'ಇಲ್ಲಿ ಒಂದಿಷ್ಟು ಆಂಗ್ಲ ಸುಂದರಿಯರು ಬ್ಯಾಲೆ ನರ್ತಿಸುತ್ತಿದ್ದರೆ ಈ ಸೌಂದರ್ಯ ಪರಿಪೂರ್ಣವಾಗಿರುತ್ತಿತ್ತು' ಎಂದು ಚಾರುದತ್ತರು ವಿಷಾದದಿಂದ ಗೊಣಗುತ್ತಿದ್ದರು.

'ರಾತ್ರಿ ಮಲಗುವ ಮೊದಲು ಒಂದು ಸುಖವಾದ ಸಂಭೋಗ ಇಲ್ಲದಿದ್ದರೆ ಎಂತ ಜೀವನವಯ್ಯಾ. ಬೆಳಗ್ಗೆ ಎದ್ದು ಒಂದು ಖಡಕ್ ಚಾ ಕುಡಿಯದಿದ್ದರೆ ಎಂತ ಬೆಳಗು ಅದು. ಮಧ್ಯಾಹ್ನ ಊಟಕ್ಕೆ ಮುಗಿಸಿ ಸ್ವಲ್ಪ ಹೊತ್ತು ಶವದ ಹಾಗೆ ಮಲಗಿ, ಸಂಜೆ ಎದ್ದು ತೋಟಕ್ಕೊಂದು ಸುತ್ತು ಹೋಗಿ ಬಂದು, ಹಜಾರದಲ್ಲಿ ಸಂಗೀತ ಕೇಳುತ್ತ ಕುಳಿತುಕೊಳ್ಳದಿದ್ದರೆ ಅದೆಂತಹ ಜನ್ಮವಯ್ಯಾ? ಬರೆಯುವುದು ಗಿರೆಯುವುದು ಅದೆಲ್ಲಾ ಅನಿಸಿದರೆ ಮಾತ್ರ. ಅಥವಾ ನಿದ್ದೆ ಬಾರದಿದ್ದರೆ. ನಾನು ಬರೆಯಲು ಶುರುಮಾಡಿದ್ದೇ ನನ್ನ ಹೆಂಡತಿಯ ಲೈಂಗಿಕ ನಿರಾಸಕ್ತಿಯ ಕಾರಣದಿಂದಾಗಿ' ಚಾರುದತ್ತರು ತಮ್ಮ ಸಣ್ಣದರಲ್ಲೇ ತೀರಿ ಹೋದ ಹೆಂಡತಿಗಿದ್ದ ಕಾಯಿಲೆಗಳನ್ನೂ ಆಕೆಯ ನಿರಾಸಕ್ತಿಯನ್ನೂ ಒತ್ತಿ ಒತ್ತಿ ವರ್ಣಿಸುತ್ತಿದ್ದರು.

ಅವರ ಹೆಂಡತಿಯನ್ನು ನಾನೂ ನೋಡಿದ್ದೆ. ಉದ್ದಕ್ಕೆ ಮಕ್ಕಳಿಗೆ ಹೊಡೆಯುವ ಒಂದು ನಾಗರಬೆತ್ತದಂತೆ ಕಾಣಿಸುತ್ತಿದ್ದ ಅವರು ಯಾವುದರ ಬಗ್ಗೆಯೂ ತಲೆ ಕೆಡಿಸಿಕೊಂಡಿರಲಿಲ್ಲ. ತಾವಾಯಿತು ತಮ್ಮ ಶಾಲೆಯಾಯಿತು ಎಂದು ತಮ್ಮ ಉರುಟು ತಲೆಯ ಮೇಲಿದ್ದ ಉದ್ದದ ಜಡೆಯನ್ನು ಅಲ್ಲಾಡಿಸುತ್ತಾ ಶಾಲೆಗೆ ಹೋಗಿ ಬರುತ್ತಿದ್ದರು, ಹೋಗಿ ಬಂದವರು ಕಾಡುದಾರಿಯಲ್ಲಿ ನಡೆದು ಹೋಗಿಬಂದ ಸುಸ್ತಿಗೆ ಮಲಗಿ ನಿದ್ದೆ ಮಾಡಿ ಬಿಡುತ್ತಿದ್ದರು. ಬೆಳಗ್ಗೆ ಎದ್ದು ಮತ್ತೆ ಶಾಲೆಗೆ.

ಆದರೆ, ನಾನು ಅವರನ್ನು ನೋಡಿದಾಗ ಅವರು ಪಾರ್ಶ್ವವಾಯು ಬಡಿದು ಉದ್ದಕ್ಕೆ ಮಲಗಿಕೊಂಡಿದ್ದರು. ಅವರು ಮಲಗುತ್ತಿದ್ದುದು ಚಾರುದತ್ತರು ಬರೆಯುತ್ತಿದ್ದ ಕೋಣೆಗೆ ಕಾಣಿಸುವ ಹಾಗೆ ಇತ್ತು. ಅಲ್ಲಿ ಕುಳಿತೇ ಅವರು ಅವರ ಬದುಕಿನ ಹಲವು ಸಂಗತಿಗಳನ್ನು ಹೇಳಿದ್ದರು.

ಈಗ ಮತ್ತೆ ಅದೇ ಲೈಂಗಿಕ ನಿರಾಸಕ್ತಿಯ ವಿಷಯವನ್ನು ಅವರು ವಿಲಾಸಿನಿಯ ಮುಂದೆ ಮತ್ತೆ ಎತ್ತಿದ್ದರು, ಬಹುಶಃ ಆಕೆಯನ್ನು ಕೊಂಚ ಉದ್ದೀಪನಗೊಳಿಸುವ ಉಮೇದಿನಿಂದ ಇರಬೇಕು. ಆಕೆ ಇನ್ನೇನು ಉದ್ದೀಪನಗೊಳ್ಳಬೇಕು ಅಷ್ಟರಲ್ಲಿ, ಗಂಡ ಶೇಷಪ್ಪನವರು ಫೋನು ಮುಗಿಸಿ ಬರುತ್ತಿರುವುದನ್ನು ಗಾಜಿನ ಗೋಡೆಯಿಂದಲೇ ಕಂಡಳು. ಕಂಡವಳು ಟಕ್ಕೆಂದು ಇನ್ನೊಂದು ಗುಟುಕು ವಿಸ್ಕಿ ಹೀರಿ, ಗಂಡ ಬಂದ ತಕ್ಷಣ ಇನ್ನೊಂದು ಸಾಹಿತ್ಯಿಕ ಪ್ರಶ್ನೆ ಒಗೆದಿದ್ದಳು.

'ಚಾರುದತ್ತರೇ, ನಿಮ್ಮ ಅನುಭವಗಳಿಗೆ ಹೋಲಿಸಿದರೆ ನೀವು ಬರೆದದ್ದು ಕಮ್ಮಿ. ಯಾಕೆ ಹಾಗೆ?'

ಆ ಪ್ರಶ್ನೆಗೆ ಏನೂ ಉತ್ತರಿಸದ ಚಾರುದತ್ತರು ರಸಭಂಗವಾದವರಂತೆ, 'ಥೂ ಬೋಳಿಮಕ್ಕಳು' ಎಂದು ಕುಳಿತಲ್ಲಿಂದ ಎದ್ದು ಜಾರುತ್ತಿದ್ದ ತಮ್ಮ ಪ್ಯಾಂಟನ್ನು ಮೇಲಕ್ಕೇರಿಸಿ ಮತ್ತೆ ಕುಳಿತುಕೊಂಡರು.

ಹಾಗೆ ಅವರು ಎದ್ದು ಕೂರುವುದು ಒಂದು ಸಂಕೇತ. ಅವರು ಹಾಗೆ ಎದ್ದು ಕೂತರೆ ಅವರ ವಿಸ್ಕಿಯ